**ಅಂತಾರಾಷ್ಟ್ರೀಯ ರಂಗಸಂದೇಶ**
**ಮಾರ್ಚ್ ೨೭ ೨೦೧೨**



**ಜಾನ್ ಮಾಲ್ಕೋವಿಚ್ © ಬಿ ಕ್ರಿಶ್ಚಿಯನ್ ಕೊಯಿಗ್ನಿ**

ಯುನೆಸ್ಕೋದ ಅಂತಾರಾಷ್ಟ್ರೀಯ ರಂಗಸಂಸ್ಥೆ ವಿಶ್ವರಂಗಭೂಮಿ ದಿನಾಚರಣೆಯ ೫೦ ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆಗಾಗಿ ನನ್ನಿಂದ ಶುಭಸಂದೇಶ ಪಡೆದು ನನ್ನನ್ನು ಗೌರವಿಸಿದೆ. ಸಹರಂಗಕರ್ಮಿಗಳಿಗೆ ಸಮಾನ ಮನಸ್ಕರಿಗೆ ಮತ್ತು ಒಡನಾಡಿಗಳಿಗೆ ನನ್ನ ಸಂಕ್ಷಿಪ್ತ ಅಭಿಪ್ರಾಯ ತಿಳಿಸಬಯಸುತ್ತೇನೆ.

ತಮ್ಮ ಕಾರ್ಯದಲ್ಲಿ ಬದ್ಧತೆ, ಸ್ವಂತಿಕೆಯಿರಲಿ. ಅದು ಘನವಾಗಿ ಹೃದಯಸ್ಪರ್ಶಿಯಾಗಿ ಅನನ್ಯ ಚಿಂತನೆಗೆ ಹಚ್ಚುವಂತಿರಲಿ. ಮಾನವೀಯತೆ ಎಂದರೆ ಏನೆಂಬುದನ್ನು ಪರಾಮರ್ಶಿಸಲು ಸಹಾಯಕವಾಗಿ, ಅದು ಮನಃಪೂರ್ವಕವಾಗಿ, ಪ್ರಾಮಾಣಿಕವಾಗಿ, ಸರಳ ಮತ್ತು ಸುಂದರವಾಗಿರಲಿ. ಅನಿವಾರ್ಯವಾದ ವಿಪತ್ತು, ಸೆನ್ಸಾರ್ ಮಾಡುವುದು, ಬಡತನ ಹಾಗು ಶೂನ್ಯವಾದ- ಇವುಗಳನ್ನು ತಾವು ಎದುರಿಸುವಂತಾಗಲಿ. ತನ್ನ ಎಲ್ಲಾ ಸಂಕೀರ್ಣತೆಗಳೊಂದಿಗೆ ಮಾನವ ಹೃದಯದ ಬಡಿತವನ್ನು ನಮಗೆ ತಿಳಿಹೇಳುವ ಪ್ರತಿಭೆ ಹಾಗು ಕಡುನಿಷ್ಠೆ, ಬದುಕಿನ ಕಾಯಕವನ್ನಾಗಿಸುವ ನಮ್ರತೆ ಮತ್ತು ಕುತೂಹಲ ತಮಗೆ ಪ್ರಾಪ್ತವಾಗಲಿ. ನಿಮ್ಮಲ್ಲಿನ ಅತ್ಯುತ್ತಮ ಪ್ರತಿಭೆ, ಏಕೆಂದರೆ ಅದು ಸದಾ ನಿಮ್ಮಲ್ಲಿ ಅತ್ಯುತ್ತಮವಾಗಿದ್ದು, ಅತ್ಯಂತ ವಿರಳ ಹಾಗು ಅಲ್ಪ ಕ್ಷಣಗಳಲ್ಲಿ 'ನಾವು ಬದುಕುವುದು ಹೇಗೆ ?' ಎನ್ನುವ ಮೂಲ ಪ್ರಶ್ನೆಯನ್ನು ರೂಪಿಸುವಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಶುಭವಾಗಲಿ.

**ಜಾನ್ ಮಾಲ್ಕೋವಿಚ್ :** ಅಮೇರಿಕಾದ ನಟ, ನಿರ್ಮಾಪಕ, ಚಿತ್ರಸಾಹಿತಿ ಮತ್ತು ನಿರ್ದೇಶಕರಾದ ಜಾನ್ ಮಾಲ್ಕೋವಿಚ್ ಮೂಲತಃ ರಂಗಭೂಮಿ ಕಲಾವಿದರು. ೭೦ ರ ದಶಕದ ಆರಂಭದಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಂಡ ಇವರು ೧೯೭೬ ರಲ್ಲಿ ಪ್ರಖ್ಯಾತ **ಸ್ಟೆಪೆನ್‌ವೂಲ್ಫ್ ಥಿಯೇಟರ್ ಕಂಪೆನಿಯನ್ನು** ಟೆರ್ರಿಕಿನ್ನಿ, ಜೆಪೆರ್ರಿ ಮತ್ತು ಗ್ಯಾರಿಸಿನ್ನೈಸ್‌ರೊಂದಿಗೆ ಸೇರಿ ಸ್ಥಾಪಿಸಿದರು.

*ಡೇಂಜರಸ್ ಲಿಯಜಾನ್ಸ್* ಚಿತ್ರದ ಮೂಲಕ ಪ್ರಸಿದ್ಧಿಗಳಿಸಿದ ನಂತರ ಅಮೇರಿಕಾ ಹಾಗು ವಿದೇಶಗಳ ೭೦ ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿ ತಮ್ಮ ಬದುಕಿನ ಪ್ರಮುಖ ಮೆಟ್ಟಲುಗಳನ್ನು ಏರತೊಡಗಿದರು. *ಪ್ಲೇಸಸ್ ಇನ್ ದಿ ಹಾರ್ಟ್*(೧೯೮೪) ಮತ್ತು *ಇನ್ ದಿ ಲೈನ್ ಆಫ್ ಫೈರ್* (೧೯೯೩) ಈ ಚಿತ್ರಗಳ ಅತ್ಯುತ್ತಮ ಪೋಷಕ ನಟನೆಗಾಗಿ ೨ ಬಾರಿ ಆಸ್ಕರ್ ಪ್ರಶಸ್ತಿಗೆ ಮಾಲ್ಕೋವಿಚ್ ಹೆಸರನ್ನು ಸೂಚಿಸಲಾಗಿತ್ತು. *ಕಿಲ್ಲಿಂಗ್ ಫೀಲ್ಡ್ಸ್, ದಿ ಡೇಂಜರಸ್ ಲಿಯಜಾನ್ಸ್, ಬೀಯಿಂಗ್ ಜಾನ್ ಮಾಲ್ಕೋವಿಚ್* ಚಿತ್ರಗಳ ಅಭಿನಯಕ್ಕಾಗಿ ಪ್ರಶಸ್ತಿಯನ್ನು ಪಡೆದರು. *ಹಿಸ್ಟೀರಿಯಾ* (೨೦೦೨), *ಗುಡ್ ಕ್ಯಾನರಿ* (೨೦೦೭), ಪ್ರಯೋಗಗಳು ಯಶಸ್ವಿಯಾದ ನಂತರ ೩ ನೇ ಪ್ರಯೋಗವಾಗಿ ಪ್ಯಾರೀಸ್ನಲ್ಲಿ *ಲೇ ಲಿಯಜಾನ್ಸ್* (೨೦೧೧) ನಿರ್ದೇಶಿಸಿದ್ದರು.

**------***------**

**ಕನ್ನಡಕ್ಕೆ : ಶ್ರೀಕಂಠ ಗುಂಡಪ್ಪ(ಹಿರಿಯ ರಂಗಕರ್ಮಿ)**

**ವಿ ಸೂ : *ಮಾರ್ಚ್ ೨೭ ರಂದು ( ಹಾಗು ಆಚೀಚೆ ದಿನಗಳಲ್ಲಿ) ನಡೆಯಲಿರುವ ಯಾವುದೇ ರಂಗಸಂಬಂಧೀ ಚಟುವಟಿಕೆ, ಕಾರ್ಯಕ್ರಮಗಳ ಮೊದಲು ಈ ಸಂದೇಶ ವಾಚನ ಅಪೇಕ್ಷಣೀಯ.***

**ವಿಳಾಸ :** ಶ್ರೀಕಂಠ ಗುಂಡಪ್ಪ, ನಂ ೫೭, 'ಈಶಾನ್ಯ' ೩ನೇ ಮೈನ್, ೩ನೇ ಕ್ರಾಸ್, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು-೫೭೦೦೨೬. ಫೋನ್ ೦೮೨೧-೨೫೫೮೮೦೧, ಮೊಬೈಲ್: ೯೯೮೬೦೦೬೬೨೫.